# ಅಮ್ಮಾಕುಟ್ಟಿ

## ಪ್ರವಾಹಕ್ಕೆ ವಿರುದ್ಧ ಈಜಿದ ಮುಖ್ಯೋಪಾಧ್ಯಾಯಿನಿ

ಮೂಲ : 'Swami Vivekananda: The Great Inspirer', ರಾಮಕೃಷ್ಣ ಶಾರದಾ ಮಿಷನ್ ಪ್ರಕಟಣೆ
ಅನುವಾದ : ಸ್ವರ್ಣಗೌರಿ

**ಪ**ರಿವ್ರಾಜಕ ದಿನಗಳಲ್ಲಿ ಸ್ವಾಮಿ ವಿವೇಕಾನಂದರು ಒಮ್ಮೆ ಎರ್ನಾಕುಳಂಗೆ ಭೇಟಿ ನೀಡಿದ್ದರು. ಅಲ್ಲಿ ದಿವಾನ್ ರಾಮ ಅಯ್ಯರ್ ಮನೆಯಲ್ಲಿ ತಂಗಿದ್ದರು. ಒಂದು ದಿನ ಸ್ವಾಮೀಜಿ ರಸ್ತೆಯಲ್ಲಿ ನಡೆಯುತ್ತಿದ್ದಾಗ ಎಲ್ಲಿಂದಲೋ ಬರುತ್ತಿದ್ದ ಹಾಡನ್ನು ಕೇಳಿ ಮೋಹಪರವಶರಾಗಿ ದಾರಿಯಲ್ಲೆ ನಿಂತುಬಿಟ್ಟರು. ಸುಪ್ರಸಿದ್ಧ ಗಾಯಕರೂ, ವಕೀಲರೂ ಆದ ದೊರೈಸ್ವಾಮಿ ಅಯ್ಯರ್ ಮನೆಯಿಂದ ಆ ಹಾಡು ಹೊರಹೊಮ್ಮಿತ್ತು. ದೊರೈಸ್ವಾಮಿಯವರು ಸಹ ಸ್ವಾಮೀಜಿಯವರ ತೇಜಸ್ಸು, ವರ್ಚಸ್ಸುಗಳಿಂದ ಆಕರ್ಷಿತರಾಗಿ ತಮ್ಮ ಮನೆಗೆ ಆಹ್ವಾನಿಸಿದರು, ಹಾಗೂ ರಾತ್ರಿ ತಮ್ಮ ಮನೆಯಲ್ಲೇ ತಂಗಬೇಕೆಂದು ವಿನಯದಿಂದ ಪ್ರಾರ್ಥಿಸಿದರು.



ಹತ್ತಿರದಲ್ಲೇ ದೊರೈಸ್ವಾಮಿಗಳ ಸಹೋದರ ದೇವರಾಜನು ವಾಸಿಸುತ್ತಿದ್ದನು. ದುರದೃಷ್ಟವಶಾತ್, ದೇವರಾಜನ ಪತ್ನಿ ಹಾಗೂ ಆತನ ಒಂದು ವರ್ಷದ ಮಗಳು ಅಮ್ಮಾಕುಟ್ಟಿ ತೀವ್ರವಾದ ಕಾಯಿಲೆಯಿಂದ ನರಳುತ್ತಿದ್ದು, ಮೃತ್ಯುವಿನ ದವಡೆಯಲ್ಲಿದ್ದರು. ದೊರೈಸ್ವಾಮಿಗಳ ತಾಯಹೃದಯ ಮಗುವನ್ನು ಆಶೀರ್ವದಿಸಲು ಸ್ವಾಮೀಜಿಯವರನ್ನು ಕೇಳಿಕೊಂಡಿತು. ಸ್ವಾಮೀಜಿ ಮಗುವಿನ ತಲೆಯ ಮೇಲೆ ಕೈಯಿಟ್ಟು ಅಕ್ಕರೆಯಿಂದ ಆಶೀರ್ವದಿಸಿದರು. ಆ ಕ್ಷಣದಲ್ಲಿ ಮಗು ಆಪತ್ತಿನಿಂದ ಪಾರಾದರೂ ಮುಂದಿನ ಜೀವನದಲ್ಲಿ ದುಃಖ ತಪ್ಪಲಿಲ್ಲ. ಅಪ್ರಾಪ್ತ ವಯಸ್ಸಿಗೆ ತಾಯಿಯಾದ ಬಾಲಕಿಯು, ಹನ್ನೊಂದು ವರ್ಷಕ್ಕೆ ಬಾಲವಿಧವೆಯಾದಳು. ಮಾವನ ಮನೆಯವರು ಈ ಪುಟ್ಟ ಬಾಲಕಿಯೊಡನೆ ಕ್ರೂರವಾಗಿ ನಡೆದುಕೊಂಡದ್ದಲ್ಲದೆ, ಮೊಮ್ಮಗಳನ್ನು ತಮ್ಮ ಬಳಿಯೇ ಇರಿಸಿಕೊಂಡು ಅಮ್ಮಾಕುಟ್ಟಿಯನ್ನು ತವರಿಗೆ ಓಡಿಸಿಬಿಟ್ಟರು. ತಾಯಿ – ಮಗಳನ್ನು ಬೇರೆ ಮಾಡಿದರು.

ಈ ಸ್ಥಿತಿಯಲ್ಲಿ ಮನೆಗೆ ಬಂದ ಮಗಳನ್ನು ಕಂಡು ಮನೆಮಂದಿ ಚಿಂತಾಕ್ರಾಂತರಾದರು. ತಂದೆಯಾದರೋ ಮಗಳ ಭವಿಷ್ಯದ ಬಗ್ಗೆ ಚಿಂತಿಸಿ ತಮ್ಮ ಕಛೇರಿಯಲ್ಲಿ ಸಹೋದ್ಯೋಗಿಯಾಗಿದ್ದ ಸುಬ್ರಹ್ಮಣ್ಯ ಅಯ್ಯರ್‌ಗೆ ಮಗಳಿಗೆ ಅಡಿಗೆ ಕೆಲಸ ಕೊಡಿಸಲು ಕೇಳಿಕೊಂಡರು. ಸುಬ್ರಹ್ಮಣ್ಯ ಅಯ್ಯರ್ ಅವರ ಮಗಳು ಸುಬ್ಬಲಕ್ಷ್ಮಿ ಈ ದಾರುಣ ವೃತ್ತಾಂತ ಕೇಳಿ ನೊಂದು, ಇದಕ್ಕೆ ಪರಿಹಾರ ಕಂಡುಹಿಡಿಲೇಬೇಕೆಂದು ಹಠತೊಟ್ಟು, ಒಂದು ವಿಧವಾಲಯವನ್ನು ಸ್ಥಾಪಿಸಿದಳು. ಹದಿನೆಂಟು ವಯಸ್ಸಿನ ಅಮ್ಮಾಕುಟ್ಟಿಯೇ ಅದರ ಪ್ರಥಮ ಸದಸ್ಯೆಯಾದಳು. ಈ ಆಲಯದ ಸದಸ್ಯೆಯರು ವಿಧವೆಯರು ಧರಿಸಬೇಕಾದ ಬಿಳಿ ಉಡುಪನ್ನು ತೊರೆದು, ಬಣ್ಣದ ಉಡುಪು ಧರಿಸಲು ಪ್ರಾರಂಭಿಸಿದರು. ಮುಂಡನ ತೊರೆದರು ಹಾಗೂ ಭಾರತದ ಸಂಸ್ಕೃತಿ ಉಳಿಸಲು ಅಧ್ಯಯನಶೀಲರಾದರು. ಅಮ್ಮಾಕುಟ್ಟಿ ಮುಂದೆ ಮಾಯಾವರಂ ಹೆಣ್ಣು ಮಕ್ಕಳ ಪ್ರೌಢಶಾಲೆಯ ಮುಖ್ಯೋಪಾಧ್ಯಾಯಿನಿಯಾದಳು.

ತನ್ನ ಒಬ್ಬಳೇ ಮಗಳಿಂದ ಬೇರ್ಪಟ್ಟ ದುಃಖವನ್ನು ಸಹಿಸಿಕೊಂಡು ಅಮ್ಮಾಕುಟ್ಟಿ ದೃಢವಾಗಿ ನಿಂತು ವಿಧವಾ ಸ್ತ್ರೀಯರ ಉದ್ಧಾರ ಕಾರ್ಯಗಳಲ್ಲಿ ಸುಬ್ಬುಲಕ್ಷ್ಮಿಗೆ ಸಂಪೂರ್ಣ ಬೆಂಬಲವಿತ್ತಳು. ವಿಧವೆಯರ ಉದ್ಧಾರಕ್ಕಾಗಿ ಸದಾ ಸಹಾಯ ಹಸ್ತವನ್ನು ಚಾಚಿದ್ದ ಅಮ್ಮಾಕುಟ್ಟಿ ತನ್ನ ದುಃಖಮಯ ಜೀವನವನ್ನು ಸಾರ್ಥಕಗೊಳಿಸಿಕೊಂಡಳು. ❁

> ಸ್ತ್ರೀಯರು ತಮ್ಮ ರೀತಿಯಲ್ಲಿಯೇ ತಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬಲ್ಲ ಸ್ಥಿತಿಯಲ್ಲಿ ನಾವು ಅವರನ್ನು ಇಡಬೇಕು. ಇತರರು ಯಾರೂ ಅವರಿಗೆ ಇದನ್ನು ಮಾಡಲಾರರು, ಮಾಡಕೂಡದು. ನಮ್ಮ ಭಾರತೀಯ ಸ್ತ್ರೀಯರು ಜಗತ್ತಿನ ಇತರ ಹೆಂಗಸರಷ್ಟೇ ಇದನ್ನು ಸಾಧಿಸಲು ಸಮರ್ಥರು.
>
> ಮೊದಲು ಸ್ತ್ರೀಯರಿಗೆ ವಿದ್ಯಾಭ್ಯಾಸ ಮತ್ತು ಸ್ವಾತಂತ್ರ್ಯ ಕೊಡಿ. ನಂತರ ಯಾವ ಸುಧಾರಣೆ ತಮಗೆ ಆವಶ್ಯಕ ಎಂಬುದನ್ನು ತಾವೇ ಹೇಳುವರು. ಅವರಿಗೆ ಸಂಬಂಧಪಟ್ಟ ವಿಷಯಗಳನ್ನು ನಿಶ್ಚಯಿಸಲು ನೀವಾರು?
>
> — ಸ್ವಾಮಿ ವಿವೇಕಾನಂದ